**ವಿಶೇಷ ಮೊಕದ್ದಮೆಃ 816/2021 ಪಿ ಡಬ್ಲ್ಯೂಃ 38**

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 25.2.2026**

**ಸಾಕ್ಷಿದಾರರನ್ನು ಪುನಃ ನ್ಯಾಯಾಲಯಕ್ಕೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಪಿ ವಕೀಲರಿಂದಃ**

ದಿಃ 13-4-2021 ರಂದು ಮಿಸ್ಸಿಂಗ್ ಕಂಪ್ಲೇಂಟ್ ಕ್ರೈಂ ನಂಃ 52/2021 ರಿಜಿಸ್ಟರ್ ಆಗಿತ್ತು. ಮೃತರಾಗಿರುತ್ತಾರೆ ಎಂದು ಹೇಳಿದಂತಹ ಜಯಮ್ಮ ಮತ್ತು ರಾಮಲಕ್ಷ್ಮಿ ರವರು ಸಣ್ಣ ಪುಟ್ಟ ಬಡ್ಡಿ ವ್ಯವಹಾರಗಳನ್ನು ಮಾಡುತ್ತಿದ್ದರು. ಸದರಿಯವರು ಹಾಗೂ ದೂರುದಾರರ ನಡುವೆ ಉತ್ತಮ ಬಾಂಧ್ಯವ್ಯ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಭಿಪ್ರಾಯದಂತೆ ಒಂದು ಮೃತ ದೇಹ ನೀರಿನಲ್ಲಿ ತೇಲಬೇಕಾದರೆ ಸುಮಾರು 16 ರಿಂದ 24 ಗಂಟೆ ಸಮಯ ಬೇಕಾಗುತ್ತದೆ. 2 ರಿಂದ 4 ದಿನ ಬೇಕಾಗುತ್ತದೆ ಎಂದರೆ ಸರಿಯಲ್ಲ. ಕೆನಾಲ್‌ನಲ್ಲಿದ್ದ ನೀರಿನ ವೇಗ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಪ್ರತಿ ಗಂಟೆಗೆ 2 ರಿಂದ 2.5 ಕಿ. ಮೀ. ವೇಗದಲ್ಲಿ ಕೆನಾಲ್ ನ ನೀರು ಚಲಿಸುತ್ತದೆ ಎಂದರೆ ಸರಿಯಲ್ಲ. ನಾನು ಕೃತ್ಯ ನಡೆದಿದೆ ಎಂದು ಹೇಳಿದಂತಹ ಸ್ಥಳದಿಂದ ಮತ್ತು ನಾನು ಮೃತ ದೇಹಗಳು ಕೆನಾಲ್‌ನಲ್ಲಿ ತೇಲಿದ್ದವು ಎಂದು ಹೇಳಿದಂತಹ ಸ್ಥಳದವರೆಗೆ ಅಂದರೆ ಹೊಳಗುಂದತನಕ ಸುಮಾರು 35 ರಿಂದ 40 ಕಿ. ಮೀ. ದೂರ ಆಗುತ್ತದೆ. ಸದರಿ ಸ್ಥಳಗಳ ನಡುವೆ ಸುಮಾರು 103 ಕಿ. ಮೀ. ದೂರ ಆಗುತ್ತದೆ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ಸದರಿ ಸ್ಥಳಗಳ ನಡುವೆ ಸುಮಾರು 103 ಕಿ. ಮೀ. ದೂರ ಇರುವುದರಿಂದ ಮೃತ ದೇಹ ತೇಲಿಕೊಂಡು ಹೋಗಲು ಸುಮಾರು 4 ರಿಂದ 5 ದಿವಸ ಸಮಯ ಬೇಕಾಗುತ್ತದೆ ಎಂದರೆ ಸರಿಯಲ್ಲ. ಜಯಮ್ಮ ರವರು ಉಪಯೋಗಿಸುತ್ತಿದ್ದ ಮೊಬೈಲ್ ನಂಬರ್ ಯಾರ ಹೆಸರನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಜಯಮ್ಮ ಮತ್ತು ರಾಮಲಕ್ಷ್ಮಿ ಬಡ್ಡಿ ವ್ಯವಹಾರ ಅಲ್ಲದೇ ನಿಧಿ ನಿಕ್ಷೇಪಗಳನ್ನು ಹುಡುಕುವ ಕೆಲಸಗಳನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತನಿಖಾ ಸಮಯದಲ್ಲಿ ನಾನು ಭೇಟಿ ನೀಡಿದಂತಹ ಸ್ಥಳಗಳು ದೇವಸ್ಥಾನ ಮತ್ತು ಐತಿಹಾಸಿಕ ಸ್ಥಳಗಳಾಗಿವೆ ಎಂದರೆ ಸರಿ. ಸದರಿ ಸ್ಥಳಗಳಿಗೆ ಅವರಿಬ್ಬರೂ ನಿಧಿ ನಿಕ್ಷೇಪಗಳನ್ನು ಹುಡುಕಲು ಹೋಗಿದ್ದರು ಎಂದರೆ ಸರಿಯಲ್ಲ. ಸದರಿಯವರುಗಳು ಮನಃ ಪೂರ್ವಕವಾಗಿ ಸದರಿ ಸ್ಥಳಗಳಿಗೆ ಭೇಟಿ ನೀಡಿದ್ದರು ಎಂದರೆ ಸರಿಯಲ್ಲ. ಅವರುಗಳನ್ನು ಯಾರೂ ಸಹ ಅಪಹರಣ

ಮಾಡಿರಲಿಲ್ಲ ಎಂದರೆ ಸರಿಯಲ್ಲ. ಸದರಿಯವರುಗಳನ್ನು ಅಪಹರಣ ಮಾಡಿದ್ದಾರೆ ಎಂದು ಯಾರೂ ಸಹ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮಾಡುತ್ತಿದ್ದ ಮೂಲ ಕೆಲಸಗಳ ಬಗ್ಗೆ ನಾನು ಹೇಳಿಲ್ಲ ಎಂದರೆ ಸರಿ. ನಾನು ಆರೋಪಿತರುಗಳನ್ನು ಒತ್ತಾಯ ಪೂರ್ವಕವಾಗಿ ಠಾಣೆಗೆ ಕರೆದುಕೊಂಡು ಹೋಗಿ ಅವರನ್ನು ಹೆದರಿಸಿ ಅವರ ಸಹಿಗಳನ್ನು ಪಡೆದು ಅವರ ಸ್ವಖುಷಿ ಹೇಳಿಕೆಗಳನ್ನು ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಬಂಗಾರದ ಆಭರಣಗಳನ್ನು ಜಯಮ್ಮ ಮತ್ತು ರಾಮಲಕ್ಷ್ಮಿರವರು ಖರೀದಿ ಮಾಡಿದ್ದರು ಎಂದು ತೋರಿಸಲು ಯಾವುದೇ ಬಿಲ್ಲುಗಳನ್ನು ಹಾಜರುಪಡಿಸಿಲ್ಲ. ರಾಜಕೀಯ ಒತ್ತಡದಿಂದ ನಾನು ಆರೋತಪಿರುಗಳನ್ನು ಈ ಪ್ರಕರಣದಲ್ಲಿ ಸೇರಿಸಿ ಅದಕ್ಕನುಗುಣವಾಗಿ ಸುಳ್ಳು ತನಿಖೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದಿದೆ ಎಂದು ನಾನು ಹೇಳಿದ ಸಮಯದಲ್ಲಿ ಕೋವಿಡ್ ಪ್ರೋಟೋ ಕಾಲ್ ಇತ್ತು ಎಂದರೆ ಸರಿಯಲ್ಲ. ಜಯಮ್ಮ ಮತ್ತು ರಾಮಲಕ್ಷ್ಮಿ ಮೃತರಾಗಿಲ್ಲದೇ ಇದ್ದರೂ ಸಹ ಅವರು ಮೃತ ರಾಗಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಅಂಶಗಳ ಸಲುವಾಗಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಕೊಂಡು ಅದಕ್ಕನುಗುಣವಾಗುವಂತೆ ಸುಳ್ಳು ತನಿಖೆಯನ್ನು ಮಾಡಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ಮತ್ತು ತನಿಖೆಯನ್ನು ಠಾಣೆಯಲ್ಲಿಯೇ ಸುಳ್ಳು ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).
ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.

**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆ:- 816/2021</u>**

**ಪ್ರಾಸಾಃ- 40 ಚಾಸಾಃ- 45**

| | | |
|---|---|---|
| ಸಾಕ್ಷಿಯ ಹೆಸರು | : | ಎಂ.ಶೇಕ್ಷಾವಲಿ |
| ತಂದೆಯ ಹೆಸರು | : | ಎಂ.ಭಾಷ |
| ವಯಸ್ಸು | : | 57 ವರ್ಷ |
| ವೃತ್ತಿ | : | ಎ.ಎಸ್.ಐ. ಕುರುಗೋಡು ಪೋಲೀಸ್ ಠಾಣೆ |
| ವಾಸಸ್ಥಳ | : | ಕುರುಗೋಡು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 25.2.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ದಿನಾಂಕ**:15-3-2021** ರಿಂದ ದಿನಾಂಕ**:27-11-2023** ರವರಿಗೆ ಬಳ್ಳಾರಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕೆಲಸ ಮಾಡಿರುತ್ತೇನೆ. ಈಗ ಹಾಲಿ ಕುರುಗೋಡು ಪೊಲೀಸ್ ಯಲ್ಲಿ ಎ.ಎಸ್.ಐ. ಕೆಲಸ ಮಾಡುತ್ತಿದ್ದೇನೆ.

ದಿನಾಂಕ;13-4-2021:- ರಂದು ನಾನು ಠಾಣಾಧಿಕಾರಿ ಕರ್ತವ್ಯದಲ್ಲಿದ್ದಾಗ ಮದ್ಯಾಹ್ನ 1-30 ಗಂಟೆಗೆ ಪಿರ್ಯಾದಿದಾರರಾದ ಶ್ರೀಮತಿ ಶ್ರಾವಣಿ ಗಂಡ ಅನುಪ ಕುಮಾರ್ ಎ. ವ:39 ವರ್ಷ, ವಾಸ: ಸಿ.ಬಿ. ಬಳ್ಳಾರಿರವರು ಠಾಣೆಗೆ ಹಾಜರಾಗಿ ಕೊಟ್ಟ ಗಣಕೀಕೃತ ದೂರನ್ನು ಸ್ವೀಕರಿಸಿಕೊಂಡು ಠಾಣೆಯ ಗುನ್ನೆ ನಂ:52-2021 ರಲ್ಲಿ ಪ್ರಕರಣ ದಾಖಲಿಸಿರುತ್ತೇನೆ.

ಸಾಕ್ಷಿ ದೂರನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ. **4** ಎಂದು ಈಗಾಗಲೇ ಗುರುತಿಸಲಾಗಿದ್ದು, ಅದು ಟ್ರೂ ಕಾಪಿ ಆಗಿದ್ದು ಸಾಕ್ಷಿ ಸಹಿಯನ್ನು ನಿಪಿ. **4 (**ಎ**)** ಎಂದು ಗುರ್ತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ.**162** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ**-162(**ಎ**)** ಎಂದು ಗುರ್ತಿಸುಲಾಯಿತು.

ಅದೇದಿನ ಕಾಣೆಯಾಗಿ ಮೇಲ್ಕಂಡ ಮಹಿಳೆರವರ ಪತ್ತೆಗಾಗಿ ಲುಕ್ ಔಟ್ ನೋಟಿಸ್ ಪ್ರಕಟಿಸಿ ಕರ್ನಾಟಕ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೆ ನಿಸ್ತಂತು

ಮೂಲಕ ರವಾನಿಸಿದೆ. ಸಾಕ್ಷಿ ನೋಟೀಸ್ ನೋಡಿ ಗುರ್ತಿಸಿದ್ದು, ಅದನ್ನು ನಿಪಿ.**163** ಎಂದು ಸಾಕ್ಷಿ ಸಹಿಯನ್ನು ನಿಪಿ.**163(ಎ)** ಎಂದು ಗುರ್ತಿಸಲಾಯಿತು.

ದಿನಾಂಕ:**14-4-2021** ರಂದು:- ಕಾಣೆಯಾದ 1) ಶ್ರೀಮತಿ ಜಯಮ್ಮ 2) ಕುಮಾರಿ ರಾಮಲಕ್ಷ್ಮಿರವರ ಮನೆಯ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಪಂಚನಾಮೆ ಮಾಡಲು ಮಹಿಳೆ ಪೊಲೀಸ್ ಠಾಣೆ ಕರ್ತವ್ಯ ಮಾಡುತ್ತಿದ್ದ ಶ್ರೀನಾಗೆಂದ್ರರವರೊಂದಿಗೆ ಪಂಚರಾದ ಶ್ರೀಅತಿಕ್ ತಂದೆ ಲೇಟ್ ಜಾಫರ್ ವ:28 ವರ್ಷ, ಮುಸ್ಲಿಂ ಜನಾಂಗ, ವಾರ್ಡನಂ:30 ಎರ್ರಿಪ್ಪ ಕಾಂಪೌಂಡ್ ಹಿಂದೆ ಬಳ್ಳಾರಿ, ಶ್ರೀ ವೆಂಕಟೇಶ ಎನ್. ತಂದೆ ಲೇಟ್ ನಾರಾಯಣ ವ:29 ವರ್ಷ, ಆದಿ ಕರ್ನಾಟಕ ಜನಾಂಗ ಜೀನ್ಸ್ ವಾಸ್ಸಿಂಗ್ ಕೆಲಸ ವಾಶ: ವಾರ್ಡ ನಂ:30 ಬಳ್ಳಾರಿರವರ ಸಮಕ್ಷಮ ಪಿರ್ಯಾದು ದಾರರು ತೋರಿಸಿದ ಮನೆಗೆ ಭೇಟಿ ನೀಡಿ ಸದರಿ ಸ್ಥಳದಲ್ಲಿ ಬೆಳಿಗ್ಗೆ 10-00 ಗಂಟೆಯಿಂದ 11-00 ಗಂಟೆಯವರೆಗೆ ಲ್ಯಾಬ್ ಟ್ಯಾಪ್ ನಲ್ಲಿ ಟೈಪ್ ಮಾಡಿ ಪಂಚನಾಮೆಯನ್ನು ತಯಾರಿಸಿದ್ದೆ. ಅದನ್ನು ನಮ್ಮ ಇಲಾಖೆಯ ಜೀಪ್ ನಂ:ಕೆ:ಎ:34-ಜಿ;0797 ನೇದ್ದರಲ್ಲಿದ್ದ Canon printer ಪ್ರಿಂಟ್‌ಯಿಂದ ಪ್ರಿಂಟ್ ತೆಗೆದು ಪಂಚನಾಮೆಯನ್ನು ಪಂಚರಿಗೆ ಓದಿ ತಿಳಿಸಿ ಅವರ ಸಹಿ ಪಡೆದುಕೊಂಡಿದ್ದೆ. ಸ್ಥಳದಲ್ಲಿ ಪೋಟೋ ತೆಗೆದಿದ್ದೆ ಮತ್ತು ನಕಾಶೆ ತಯಾರಿಸಿದ್ದೆ.

ಸಾಕ್ಷಿ ಪಂಚನಾಮೆಯನ್ನು ನೋಡಿ ಗುರ್ತಿಸಿದ್ದು, ಅದನ್ನು ನಿಪಿ. **2** ಎಂದು ಈಗಾಗಲೇ ಗುರ್ತಿಸಿಸಲಾಗಿದ್ದು ಅದು ಟ್ರೂ ಕಾಪಿಯಾಗಿದ್ದು ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ. **2 (ಎ)** ಎಂದು ಗುರ್ತಿಸಲಾಯಿತು. ಪೋಟೋಗಳನ್ನು ಈಗಾಗಲೇ ನಿಪಿ..**3** ಎಂದು ಗುರ್ತಿಸಲಾಗಿದೆ. ಸಾಕ್ಷಿಯು ನಕಾಶೆಯ ಟ್ರೂ ಕಾಪಿಯನ್ನು ನೋಡಿ ಗುರ್ತಿಸಿದ್ದು, ಅದನ್ನು ನಿಪಿ-**164** ಎಂದು ಗುರ್ತಿಸಲಾಯಿತು.

ಸ್ಥಳದಲ್ಲಿದ್ದ ಹಾಜರಿದ್ದ ಸಾಕ್ಷಿದಾರರಾದ:- ಚಾಸಾ **15,** ಹೆಚ್. ಅನುಪ್ ಕುಮಾರ್, ಶ್ರೀಮತಿ ರಾಧ ಗಂಡ ಮಸ್ತಾನ್ ರವರ ಹೇಳಿಕೆಗಳನ್ನುಪಡೆದುಕೊಂಡಿದ್ದೆ.

ದಿನಾಂಕ:**16-4-2021** ರಂದು:- ಕಾಣೆಯಾದ ಜಯಮ್ಮರವರ ಮೋಬೈಲ್ ನಂ:6360909706 ಐ.ಎಂ.ಇ.ಐ.ನಂ: 9116618371213 ಸಿ.ಡಿ.ಆರ್. ನೀಡಲು ಮಾನ್ಯ ಎಸ್.ಸಿ.ಸಾಹೇಬರವರಿಗೆ ವರದಿಯನ್ನು ನಿವೇಧಿಸಿಕೊಂಡಿದ್ದೆ. ವಾರ್ತ ಹಾಗೂ ಪ್ರಚಾರ ಇಲಾಖೆ ಬಳ್ಳಾರಿರವರಿಗೆ ಕಾಣೆಯಾದ ಜಯಮ್ಮ & ರಾಮಲಕ್ಷ್ಮಿ ಇಬ್ಬರ ಪತ್ತೆಗಾಗಿ ಪ್ರಕಟಣೆಮಾಡಲು ವರದಿಯನ್ನು ಮಾನ್ಯ ಪಿ.ಎಸ್.ಐ. ಚಾಸಾ.53 ಆದೇಶದ ಮುಖಾಂತರ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಲೋಕ ದರ್ಶನ ದಿನ ಪತ್ರಿಕೆಯಲ್ಲಿ ಕಾಣೆಯಾದವವರ ಬಗ್ಗೆ ಪ್ರಕಟಣೆ ಬಂದಿರುತ್ತದೆ. ಅದೇ ದಿನ ಮ.ಪಿ.ಸಿ.1087 ಶ್ರೀಮತಿ

ಶೋಭಾರವರನ್ನು ಕಾಣೆಯಾದ ಮಹಿಳೆರವರನ್ನು ಪತ್ತೆಗಾಗಿ ನೇಮಿಸಿ ರಹದಾರಿ ಪತ್ರವನ್ನು ಕೊಟ್ಟು ಕಳಿಸಿರುತ್ತೇನೆ ಸಾಕ್ಷಿಯು ಎಸ್ ಪಿ ರವರಿಗೆ ನೀಡಿದ ಮನವಿ ಪತ್ರದ ಟ್ರೂ ಕಾಪಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ. **165** ಎಂದು ಗುರ್ತಿಸಲಾಯಿತು. ಸಾಕ್ಷಿಯಿು ಲೋಕ ದರ್ಶನ ದಿನ ಪತ್ರಿಕೆಯ ಪ್ರಕಟಣೆಯ ನೋಡಿ ಗುರುತಿಸಿದ್ದು ಅದನ್ನು ನಿಪಿ-**166** ಎಂದು ಗುರ್ತಿಸಲಾಯಿತು.

ದಿನಾಂಕ:**17-4-2021** ರಂದು:- ಕಾಣೆಯಾದ ಬಗ್ಗೆ ಶ್ರೀಮತಿ ಜಯಮ್ಮ ಮತ್ತು ಕುಮಾರಿ ರಾಮಲಕ್ಷ್ಮಿರವರ ಪತ್ತೆಗಾಗಿ ವಿಜಯ ನಗರವಾಣಿ, ಉದಯವಾಣಿ, ಹೊಸಪೇಟೆ ಟೈಮ್ಸ್ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಬಂದಿರುತ್ತದೆ. ಸದರಿ ದಿನ ಪತ್ರಿಕೆಗಳ ಪ್ರಕಟಣೆಗಳ ಟ್ರೂ ಕಾಪಿಯನ್ನು ನಿಪಿ-167, ನಿಪಿ-168 ಮತ್ತು ನಿಪಿ-169 ಎಂದು ಕ್ರಮವಾಗಿ ಗುರುತಿಸಲಾಯಿತು.

ದಿನಾಂಕ:**20-4-2021** ರಂದು:- ಮ.ಪಿ.ಸಿ.1078 ಶ್ರೀಮತಿ ಶೋಭಾರವರನ್ನು ಕಾಣೆಯಾದ ಮಹಿಳೆ ರವರನ್ನು ಪತ್ತೆಗಾಗಿ ಗುಲಬುರ್ಗಾ, ಕುಷ್ಟಗಿ, ಇಲ್‌ಕಲ್ಲ್ ದೇವದುರ್ಗ ಪೊಲೀಸ್ ಠಾಣೆಗಳಿಗೆ ಹೋಗಿ ಹುಡುಕಾಡಿ ಬಂದಿದ್ದು ಇವರಿಂದ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ ಅಂತ ತಮ್ಮ ವಿಶೇಷ ವರದಿಯನ್ನು ನೀಡಿರುತ್ತಾರೆ. ಸದರಿ ವಿಶೇಷ ವರದಿಯ ಟ್ರೂ ಕಾಪಿಯನ್ನು ನಿಪಿ.**170** ಎಂದು ಗುರ್ತಿಸಲಾಯಿತು.

ದಿನಾಂಕ:**23-4-2021** ರಂದು:- ಕಾಣೆಯಾದ ರಾಜಲಕ್ಷ್ಮಿ ತಂದೆ ನಾರಾಯಪ್ಪ ವಾಸ: ಬಳ್ಳಾರಿರವರ ಬ್ಯಾಂಕ್ ಖಾತೆಗಳ ವಿವರಗಳನ್ನು ನೀಡಲು ಪ್ರಗತಿ ಗ್ರಾಮೀಣ ಬ್ಯಾಂಕ್ ಸಿ.ಬಿ.ರವರಿಗೆ ವರದಿಯನ್ನು ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ ಮನವಿ ಪತ್ರದ ಟ್ರೂ ಕಾಪಿ ನೋಡಿ ಗುರ್ತಿಸಿದ್ದು, ಅದನ್ನು ನಿಪಿ.**171** ಎಂದು ಗುರ್ತಿಸಲಾಯಿತು.

ದಿನಾಂಕ:**22-5-2021** ರಂದು:- ನಾನು ಆಂದ್ರಪ್ರದೇಶದ ಹೊಳಗುಂದ ಪಿ.ಎಸ್. ಸರಹದ್ದಿಗೆ ಬರುವ ಎಲ್ ಎಲ್ ಸಿ ಕಾಲುವೆ ಉದ್ದಕ್ಕೂ ಕಾಣೆಯಾದವರ ಪತ್ತೆಗಾಗಿ ಹೋಗಿದ್ದು, ನಾನು ಮತ್ತು ಹೋಂಗಾರ್ಡ ನಂ:247 ಹೊನ್ನೂರ ಸ್ವಾಮಿರವರ ಹೊಳಗುಂದಿ ಎಲ್ ಎಲ್ ಸಿ ಕಾಲುವೆ ಉದ್ದಕ್ಕೂ ಹುಡುಕಾಡಿದ್ದು ಮತ್ತು ಠಾಣೆಗೆ ಹೋಗಿ ಈ ಬಗ್ಗೆ ವಿಚಾರಿಸಲು ಇವರಿಂದ ಯಾವುದೇ ಉಪಯುಕ್ತವಾದ ಮಾಹಿತಿ ಸಿಕ್ಕಿರುವುದಿಲ್ಲ.

ದಿನಾಂಕ:**26-5-2021** ರಂದು:- ನಾನು ಮತ್ತು ಹೆಚ್.ಸಿ.212 ರವರೊಂದಿಗೆ ಕಾಣೆಯಾದ ಮಹಿಳೆರನ್ನು ಪತ್ತೆಗಾಗಿ ಹೋಗಿದ್ದು, ನಾವಿಬ್ಬರು ಸಂಡೂರು, ತೋರಗಲ್ಲು ಕಡೆಗೆ ಹೋಗಿ ಎಲ್ ಎಲ್ ಸಿ ಕಾಲುವೆಯ ಸುತ್ತ ಮುತ್ತ ಹುಡುಕಾಡಿದಾರೂ ಯಾವುದೇ ಹೆಣ ಪತ್ತೆಯಾಗಿರುವುದಿಲ್ಲ.

ದಿನಾಂಕ:**07-6-2021** ರಂದು:- ಮದ್ಯಾಹ್ನ 12-30 ಗಂಟೆಗೆ ಪಿರ್ಯಾದಿ ಶ್ರಾವಣಿರವರು ಠಾಣೆಗೆ ಬಂದು ತನ್ನ ತಾಯಿ, ತಂಗಿಯನ್ನು ಹಣದ ವ್ಯವಹಾರದ ವಿಚಾರದಲ್ಲಿ ಅಗಸರ ಮಲ್ಲಯ್ಯರವರು ಕಾರ್‌ನಲ್ಲಿ ಕಿಡ್ನ್ಯಾಪ್ ಮಾಡಿಕೊಂಡು ಹೋಗಿರುತ್ತಾರೆ ಅಂತ ಚಾಸಾ.53 ಶ್ರೀವಾಸುಕುಮಾರ್‌ಕೆ.ಬಿ. ಪಿ.ಐ.ರವರ ಮುಂದೆ ದೂರು ಕೊಟ್ಟ ನಂತರ ಮಹಿಳೆ ಪೊಲೀಸ್ ಠಾಣೆ ಗುನ್ನೆ ನಂ:74-2021 ಕಲಂ:364 ಐ.ಪಿ.ಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಕೊಂಡಿರುತ್ತಾರೆ.

ದಿನಾಂಕ:**8-6-2021** ರಂದು ಚಾಸಾ 53 ರವರು ನನಗೆ ಮತ್ತು ಹೆಚ್.ಸಿ.454 ಶ್ರೀಮುಕ್ತಿಯಾರ್ ರವರಿಗೆ ಈ ಪ್ರಕರಣದ ಆರೋಪಿ -01 & 02 ಪತ್ತೆಗಾಗಿ, ಬೆಳಿಗಿನ ಜಾವ 2-30 ಗಂಟೆಗೆ ನಮಗೆ ನೇಮಕ ಮಾಡಿ ಕಳಿಸಿದ್ದು, ನಾವುಗಳು ಬೆಳಗಿನ ಜಾವ 4-30 ಗಂಟೆಗೆ ಬಳ್ಳಾರಿ ಬೆಳಗಲ್ ಕ್ರಾಸ್ ಸಿ.ಎಂ.ಸಿ. ಕಾಲೋನಿಯಲ್ಲಿರುವ ಎ-01 ಅಗಸರ ಮಲ್ಲಯ್ಯನ ಮನೆಗೆ ಭೇಟಿ ನೀಡಿ ಅಲ್ಲಿದ್ದ ಆರೋಪಿ 1 ರವರನ್ನು ನಾವಿಬ್ಬರು ವಶಕ್ಕೆ ತೆಗೆದುಕೊಂಡು ಬೆಳಗಿನ ಜಾವ 4-50 ಗಂಟೆಗೆ ಠಾಣೆಗೆ ಕರೆದಕೊಂಡು ಬಂದು ಪಿ.ಐ.ರವರ ಮುಂದೆ ಹಾಜರು ಪಡಿಸಿದೆವು.

ನಂತರ ಎ-2 ಸೌರಪ್ಪ @ ಸೂರಿರವರನ್ನು ಪತ್ತೆಗಾಗಿ ನಾನು ಮತ್ತು ಹೆಚ್.ಸಿ.454 ಶ್ರೀಮುಕ್ತಿಯಾರ್ ರವರು ಹೋಗಿ ಬೆಳಿಗ್ಗೆ 7-15 ಗಂಟೆಗೆ ಬಳ್ಳಾರಿ ಕೌಲ್ ಬಜಾರ್ ಏರಿಯಾದ ಟಿಬಿ ಸ್ಯಾನಿಟೋರಿಯಂ ಹತ್ತಿರ 2 ನೇ ಆರೋಪಿ ಸೌರಪ್ಪನನ್ನು ವಶಕ್ಕೆ ತೆಗೆದುಕೊಂಡು ಬೆಳಿಗ್ಗೆ 7-35 ಗಂಟೆಗೆ ಎ-2 ರವರನ್ನು ಠಾಣೆಗೆ ಕರೆದುಕೊಂಡು ಪಿ.ಐ.ರವರ ಮುಂದೆ ಹಾಜರು ಪಡಿಸಿದೆವು ಮತ್ತು ಈ ಬಗ್ಗೆ ವರದಿಯನ್ನು ನೀಡಿದ್ದೆ. ಸಾಕ್ಷಿ ಸದ್ರಿ ವರದಿ ನೋಡಿ ಗುರ್ತಿಸಿದ್ದು, ಅದನ್ನು ನಿಪಿ.**172** ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ.**172(ಎ)** ಎಂದು ಗುರ್ತಿಸಲಾಯಿತು.

ದಿನಾಂಕ:**08-6-2021** ರಂದು ಪಿ.ಐ.ರವರು ಇಲಾಖೆಯ ಜೀಪ್ ನಲ್ಲಿ ನನ್ನನ್ನು ಮತ್ತು ಉಳಿದ ಪೋಲೀಸ್ ಸಿಬ್ಬಂದಿರವರನ್ನು ಮತ್ತು ಇಲಾಖೆ ವ್ಯಾನ್‌ನಲ್ಲಿ ಈ ಪ್ರಕರಣದಲ್ಲಿ ಅಪಾದಿತರಾದ ಎ-01 ಮಲ್ಲಯ್ಯ ಮತ್ತು ಎ-02 ಸೌರಪ್ಪ @ ಸೂರಿರವರು ಸಿಬ್ಬಂದಿರವರ ಬೆಂಗಾವಲಿನಲ್ಲಿ ಮೃತ ಜಯಮ್ಮ ಮತ್ತು ರಾಮಲಕ್ಷ್ಮಿರವರೊಂದಿಗೆ ಊಟ ಮಾಡಿದ ಸ್ಥಳ ಮತ್ತು ಇಬ್ಬರನ್ನು ಕೊಲೆ ಮಾಡಿದ ಸ್ಥಳಕ್ಕೆ ಪಂಚರಾದ (1) ವಿ.ಶ್ರೀನಿವಾಸ ತಂದೆ ವೆಂಕಟಣ್ಣ ವ:24 ವಾಲ್ಮೀಕಿ ಜನಾಂಗ, ಜವಾನರು, ನಿಯೋಜನೆ ಉಪ ನಿರ್ದೇಶಕರು ಕಛೇರಿ ಬಳ್ಳಾರಿ (2) ಹೊನ್ನೂರಪ್ಪ ತಂದೆ ಮಲ್ಲಪ್ಪ ವ:58 ವರ್ಷ, ಎಸ್.ಸಿ.ಜನಾಂಗ, ಎಫ್.ಡಿ.ಎ(ಶಿಶು ಅಭಿವೃದ್ದಿಯೋಜನಾಧಿಕಾಗಳು ಕಛೇರಿ ಬಳ್ಳಾರಿ ರವರನ್ನು ಆರೋಪಿತರು ಕರೆದುಕೊಂಡು ಹೋಗಿ ತೋರಿಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು. ಚಾಸಾ 53 ರವರು ಮೃತರು ಊಟ ಮಾಡಿದ ಸ್ಥಳದಲ್ಲಿ ಮದ್ಯಾಹ್ನ 12-40 ಗಂಟೆಯಿಂದ ಮದ್ಯಾಹ್ನ 1-10 ಗಂಟೆಯವರೆಗೆ ಪಂಚನಾವೆಯನ್ನು ನಿಪಿ-74 ರಂತೆ ನಮ್ಮ

ಸಮಕ್ಷಮ ಮಾಡಿದ್ದರು. ಆರೋಪಿತರು ಮೃತರನ್ನು ಕೊಲೆಮಾಡಿದ ದಾಸಾಪುರ ಗ್ರಾಮದ ಕಾಲುವೆ ಬಳಿ ಕಾರ್ ನಿಲ್ಲಿಸಿದ ಸ್ಥಳ ಮತ್ತು ರಾಡಿನಿಂದ ತಲೆಗೆ ಹೊಡೆದ ಸ್ಥಳದಲ್ಲಿ ಮಧ್ಯಾಹ್ನ 1-15 ಗಂಟೆಯಿಂದ ಮಧ್ಯಾಹ್ನ 2-40 ಗಂಟೆಯವರೆಗೆ ನಿಪಿ-74 ರಂತೆ ಪಂಚನಾಮೆಯನ್ನು ಮಾಡಿ ಮು ಮಾ 1 ರಾಡನ್ನು ಜಪ್ತು ಮಾಡಿಕೊಳ್ಳಲಾಗಿತ್ತು. ನಿಪಿ-74 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-74(ಎಫ್) ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ನಿಪಿ-75 ರಂತೆ ನಕಾಶೆ ತಯಾರಿಸಲಾಗಿತ್ತು. ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-75(ಎಫ್) ಎಂದು ಗುರ್ತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ನಿಪಿ**-76** ಮತ್ತು ನಿಪಿ**-77** ರಂತೆ ಪೋಟೋ ತೆಗೆಯಲಾಗಿತ್ತು. ಪಂಚನಾಮೆಯ ಸಮಯದಲ್ಲಿ ನಿಪಿ**-80** ವೀಡಿಯೋ ಸಿಡಿಯಲ್ಲಿರುವಂತೆ ವೀಡಿಯೋ ಮಾಡಿಕೊಳ್ಳಲಾಗಿತ್ತು.

ದಿನಾಂಕ**:8-6-2021** ರಂದು ಬಳ್ಳಾರಿ ಟಿಬಿ ಸ್ಯಾನಿಟೋರಿಯಂ ಹತ್ತಿರ ಇರುವ ಮಲ್ಲಯ್ಯನ ಲೇ ಔಟ್ ಒಂದನೇ ಕ್ರಾಸ್ ಬಳಿ ಆರೋಪಿ 1 ಮಲ್ಲಯ್ಯ ಹಾಜರು ಪಡಿಸಿದ ಕಾರ್ ನಂ:ಕ:ಎ:20-ಎನ್-7823 ನೇದ್ದನ್ನು ಪಂಚನಾಮೆ ಮಾಡಿ ಸ್ವೀಕರಿಸಿದ್ದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.78 ಎಂದು ಗುರುತಿಸಲಾಗಿದೆ. ನಿಪಿ-79 ಪಂಚನಾಮೆಯ ಸಮಯದಲ್ಲಿ ತೆಗೆದ ಪೋಟೋ ಆಗಿದೆ.

ದಿನಾಂಕ**:11-6-2021** ರಂದು ನನ್ನನ್ನು ಮತ್ತು ಹೆಚ್.ಸಿ.454 ಶ್ರೀಮುಕ್ತಿಯರ್ ಇಬ್ಬರನ್ನು ಈ ಪ್ರಕರಣದ ಶವದ ಪತ್ತೆಗಾಗಿ ಜ್ಞಾಪನ ಪತ್ರವನ್ನು ಚಾಸಾ.53 ರವರು ನೀಡಿ ನೇಮಕ ಮಾಡಿ ಕಳಿಸಿದ್ದರು. ನಾವಿಬ್ಬರು ಹೊಳಗುಂದ,ಆದೋನಿ,ಕೋದುಮೂರ ಪಿ.ಎಸ್. ಪಿ.ಎಸ್. ಹಾಗೂ ಎಮ್ಮಿಗನೂರು ರೂರಲ್ ಪಿ.ಎಸ್. ಮತ್ತು ಕಾರ್ನೂಲ್ ಡಿ.ಸಿ.ಆರ್. ಬಿ. ಇವರಿಗೆ ಮನವಿ ಪತ್ರಗಳನ್ನು ಸಲ್ಲಿಸಿ ಸಂಬಂಧಪಟ್ಟ ಎಲ್.ಎಲ್.ಸಿ ಕಾಲುವೆಗಳಿಗೆ ಸಹ ಬೇಟಿ ನೀಡಿ ಹುಡುಕಾಡಿದಾರೂ ಶವಗಳ ಪತ್ತೆ ಆಗಿರುವುದಿಲ್ಲ. ಸಾಕ್ಷಿ ಗುರುತಿಸಿದ ದಿಃ 11-6-2021 ರ 6 ಮನವಿ ಪತ್ರಗಳನ್ನು ನಿಪಿ-173 ರಿಂದ ನಿಪಿ-178 ಎಂದು ಗುರುತಿಸಲಾಯಿತು. ಅವುಗಳಲ್ಲಿ ಸಾಕ್ಷಿಯ ಸಹಿಗಳನ್ನು ನಿಪಿ-173(ಎ) ರಿಂದ ನಿಪಿ-178(ಎ) ಎಂದು ಗುರುತಿಸಲಾಯಿತು.

ನಾನು ಬೇಟಿ ನೀಡಿದ ಎಲ್ಲಾ ಸ್ಥಳಗಳಲ್ಲಿ ಪೋಟೋಗಳನ್ನು ತೆಗೆದಿದ್ದೆ. ಸದರಿ ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-179 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿಲ್ಲದೇ ಇದ್ದ ಕಾರಣ ದಿನಾಂಕ:12-6-2021 ರಂದು ಠಾಣೆಗೆ ಬಂದು ನನ್ನ ವರದಿಯನ್ನು ನೀಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರ್ತಿಸಿದ್ದು, ಅದನ್ನು ಈಗಾಗಲೇ ನಿಪಿ.126 ಎಂದು ಗುರ್ತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ.126(ಬಿ) ಎಂದು ಗುರ್ತಿಸಲಾಯಿತು.

ದಿನಾಂಕ **15-6-2021** ರಂದು ಆರೋಪಿ 3 & 4 ರವರು ಹಾಜರು ಪಡಿಸಿದ ಮೋಬೈಲ್ ಹಾಗೂ ಆಟೋ ರಿಕ್ಷಾ ನಂ:ಕೆ:ಎ:34-ಎ 2957 ನೇದ್ದನ್ನು ಪಂಚರಾದ 1) ಡಿ.ಎಂ.ರವಿಶಂಕರ್ ತಂದೆ ಸದ್ಯೋಜ್ಯಾತಪ್ಪ , 2) ಡಿ.ಮಹಮ್ಮದ್ ತಂದೆ ಎಲ್. ದಸ್ತಗಿರಿ ಸಾಬ್ ರವರ ಸಮಕ್ಷಮ ಬೆಳಿಗ್ಗೆ 11-35 ಗಂಟಯಿಂದ ಮದ್ಯಾಹ್ನ 12-20 ಗಂಟೆಯವರೆಗೆ ನಿಪಿ.81 ರಂತೆ ಜಪ್ತು ಪಂಚನಾಮೆಯನ್ನು ಮಾಡಿ ಜಪ್ತು ಮಾಡಿಕೊಂಡಿರುತ್ತೇನೆ. ನಿಪಿ.**81** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ**-81(**ಬಿ**)** ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ಎಂ.ಓ. **2 & 3** ಮೊಬೈಲ್ ಗಳನ್ನು ಮತ್ತು ನಿ.ಪಿ.**82** ರಿಂದ **84** ರಲ್ಲಿ ಕಾಣಿಸುತ್ತಿರುವ ಆಟೋವನ್ನು ಜಪ್ತು ಮಾಡಿಕೊಂಡಿದ್ದ.

ದಿನಾಂಕ**:15-6-2021** ರಂದು ಆರೋಪಿ 01 ರಿಂದ 04 ರವರು ಕೊಲೆ ಮಾಡಲು ಪ್ಲಾನ್ ಮಾಡಿದ ಸ್ಥಳವನ್ನು ತೋರಿಸುವುದಾಗಿ ಹೇಳಿ ಕುವೆಂಪು ನಗರ 3 ನೇ ಕ್ರಾಸ್‌ನಲ್ಲಿರುವ ಹೆಚ.ಎಲ್.ಸಿ. ಕಾಲುವೆ ಬಳಿ ಕರೆದುಕೊಂಡು ಹೋಗಿದ್ದರಿಂದ ಅಲ್ಲಿ ನಿಪಿ.**86** ರಂತೆ ಪಂಚನಾಮೆಯನ್ನು ಮೇಲ್ಕಂಡ ಪಂಚರ ಸಮಕ್ಷಮ ಮದ್ಯಾಹ್ನ 12-50 ಗಂಟೆಯಿಂದ ಮದ್ಯಾಹ್ನ 1-20 ಗಂಟೆಯವರೆಗೆ ಮಾಡಿದ್ದ. ಸಾಕ್ಷಿಯು ನಿಪಿ **86** ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿಪಿ.**86(** ಡಿ**)** ಎಂದು ಗುರ್ತಿಸಲಾಯಿತು.

ದಿನಾಂಕ:15-6-2021 ರಂದು ಆರೋಪಿ 01 ರಿಂದ 04 ರವರು ಕೊಲೆ ಮಾಡಲು ಪ್ಲಾನ್ ಮಾಡಿದ ಸ್ಥಳವಾದ ಗಟ್ಟು ಮಲ್ಲಯ್ಯ ದೇವಸ್ಥಾನದ ಬಳಿ ಕರೆದುಕೊಂಡು ಹೋಗಿ ತೋರಿಸಿದ್ದರಿಂದ ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಮೇಲ್ಕಂಡ ಪಂಚರ ಸಮಕ್ಷಮ ಮದ್ಯಾಹ್ನ 3-00 ಗಂಟೆಯಿಂದ ಮದ್ಯಾಹ್ನ 3-45 ಗಂಟೆಯವರೆಗೆ ಪಂಚರು ಹೇಳಿದಂತೆ ನಿಪಿ. 87 ರಂತೆ ಮಾಡಿದ್ದ. ನಿಪಿ.**87** ಪಂಚನಾಮೆಯಲ್ಲಿ ಸಾಕ್ಷಿಯ ಸಹಿಯನ್ನು ನಿಪಿ**-87(**ಎಲ್**)** ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ನಿಪಿ **100** ರಂತೆ ವೀಡಿಯೋ ಸಿ.ಡಿ. ಮಾಡಿದ್ದ. ನಿ .ಪಿ.**88** ಮತ್ತು **89** ರಂತೆ ಪೋಟೋಗಳನ್ನು ತೆಗೆಯಲಾಗಿತ್ತು.

ದಿನಾಂಕ: 15-6-2021 ರಂದು ಆರೋಪಿ 01 ರಿಂದ 04 ರವರು ಕೊಲೆ ಮಾಡಿದ ಸ್ಥಳವಾದ ಸಿರಿಗೇರಿ ರಸ್ತೆಯ ದಾಸಾಪುರ ಗ್ರಾಮದ ಎಲ್.ಎಲ್.ಸಿ.ಕೆನಾಳ್ ಬಳಿ ಆರೋಪಿತರು ಕರೆದುಕೊಂಡು ಹೋಗಿದ್ದರಿಂದ ಸದರಿ ಸ್ಥಳದಲ್ಲಿ ಸಂಜೆ 5 ಗಂಟೆಯಿಂದ ಸಂಜೆ 5-45 ಗಂಟೆವರೆಗೆ ಪಂಚನಾಮೆಯನ್ನು ನಿಪಿ.**90** ರಂತೆ ಪಂಚನಾಮೆ ಮಾಡಲಾಗಿತ್ತು. ಅದನ್ನು ನಾನು ಬರೆದಿದ್ದ. ಸಾಕ್ಷಿಯ ಸಹಿಯನ್ನು ನಿಪಿ-90(ಎಲ್) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ನಿಪಿ.**91** ಮತ್ತು **92** ರಂತೆ ಪೋಟೋ ತೆಗೆಸಲಾಗಿತ್ತು.

ದಿನಾಂಕ:**-16-6-2021** ರಂದು ಎ-01 ರವರು ಹೊಸಪೇಟೆ ರೋರಲ್ ಪೊಲೀಸ್ ಠಾಣೆಯ ಸರಹದ್ದಿಗೆ ಬರುವ ಸಿದ್ದಿಪ್ರಿಯ ಕಲ್ಯಾಣ ಮಂಟಪ್ಪದ ಮುಂದೆ ಡ್ಯಾಂ ರೋಡ್‌ನಲ್ಲಿ ಎ-01 ಆರೋಪಿ ನಾಗರಾಜನಿಗೆ 10 ಸಾವಿರ ರೂ ಕೊಟ್ಟ ಸ್ಥಳವನ್ನು ತೋರಿಸಿದ್ದರಿಂದ ಅಲ್ಲಿ ಪಂಚರ ಸಮಕ್ಷಮ ಬೆಳಿಗ್ಗೆ 9-45 ಗಂಟೆಯಿಂದ ಬೆಳಿಗ್ಗೆ 10-30 ಗಂಟೆಯವರೆಗೆ ನಿಪಿ.**93** ರಂತೆ ಪಂಚನಾಮೆಯನ್ನು ಮಾಡಲಾಗಿತ್ತು. ಅದನ್ನು ನಾನು ಬರೆದು ದಸ್ತೂರಿ ಸಹಿ ಮಾಡಿರುತ್ತೇನೆ. ಸಾಕ್ಷಿ ನಿಪಿ.**93** ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರ್ತಿಸಿದ್ದು ಅದನ್ನು ನಿಪಿ**-93(ಇ)** ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ನಿಪಿ.**94 & 95** ಪೋಟೋಗಳನ್ನು ತೆಗೆಯಲಾಗಿತ್ತು.

ದಿನಾಂಕ:**16-6-2021** ರಂದು ಎ-01 ನು ಹೊಸಪೇಟೆಯಲ್ಲಿರುವ ನಧಾಫ್ ಡಿಲಕ್ಸ್ ಲಾಡ್ಜ್ ನಲ್ಲಿ ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಮೇಲ್ಕಂಡ ಪಂಚರ ಸಮಕ್ಷಮ ಪಿ.ಐ.ರವರು ಬೆಳಿಗ್ಗೆ 11-00 ಗಂಟೆಯಿಂದ ಮದ್ಯಾಹ್ನ 1-00 ಗಂಟೆಯವರೆಗೆ ನಿಪಿ.37 ರಂತೆ ಪಂಚನಾಮೆ ಯನ್ನು ಮಾಡಿದ್ದರು. ಅದನ್ನು ನಾನು ಬರೆದು ದಸ್ತೂರಿ ಸಹಿ ಮಾಡಿದೆ. ಸಾಕ್ಷಿ ನಿಪಿ.**37** ರಲ್ಲಿ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ.37(ಎಫ್) ಎಂದು ಗುರ್ತಿಸಲಾಯಿತು. ಅದೇ ಸಮಯದಲ್ಲಿ ನಿಪಿ.99 ರಂತೆ ವಿಡೀಯೋ ಮಾಡಿಕೊಳ್ಳಲಾಗಿತ್ತು ಹಾಗೂ ನಿಪಿ.38 ಪೋಟೋ ತೆಗೆಸಲಾಗಿತ್ತು.

ದಿನಾಂಕ:**16-6-2021** ರಂದು ಎ-01 ನು ಬಳ್ಳಾರಿಯಲ್ಲಿರುವ ಬ್ರೂಸ್‌ಪೇಟೆ ಪೊಲೀಸ್‌ಠಾಣೆಯ ಫೆಡ್ ಬ್ಯಾಂಕ್ ನಲ್ಲಿ ಮೃತರ ಬಂಗಾರದ ಆಭರಣಗಳನ್ನು ಅಡವಿಟ್ಟಿದ ಬ್ಯಾಂಕ್ ನ್ನು ತೋರಿಸಿದ್ದರಿಂದ ಅಲ್ಲಿ ಪಂಚನಾಮೆಯನ್ನು ಮೇಲ್ಕಂಡ ಪಂಚರ ಸಮಕ್ಷಮ ಮದ್ಯಾಹ್ನ 3-15 ಗಂಟೆಯಿಂದ ಸಂಜೆ 4-15 ಗಂಟೆಯವರೆಗೆ ನಿಪಿ.8 ರಂತೆ ಮಾಡಲಾಗಿತ್ತು. ಅದನ್ನು ನಾನು ಬರೆದು ದಸ್ತೂರ ಸಹಿ ಮಾಡಿದ್ದೆ. ಸಾಕ್ಷಿಯ ಸಹಿಯನ್ನು ನಿಪಿ8(ಜಿ) ಎಂದು ಗುರ್ತಿಸಲಾಯಿತು.

ದಿನಾಂಕ:16-6-2021 ರಂದು ಅಪಾದಿತ ಮಲ್ಲಯ್ಯರವರ ಮನೆಯ ಶೋಧನಾ ಪಂಚನಾಮೆಯನ್ನು ಮೇಲ್ಕಂಡ ಪಂಚರ ಸಮಕ್ಷಮ ಪಿ.ಐ.ರವರ ಹೇಳಿದಂತೆ ಸಂಜೆ 5 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಿಪಿ.56 ರಂತೆ ಬರೆದು ಮುಗಿಸಲಾಯಿತು ಪಂಚನಾಮೆಗೆ ದಸ್ತೂರ ಸಹಿ ಮಾಡಿದೆ. ಸಾಕ್ಷಿಯ ನಿಪಿ.56 ರಲ್ಲಿಯ ಸಹಿಯನ್ನು ನಿಪಿ.56(ಇ) ಎಂದು ಗುರ್ತಿಸಲಾಯಿತು. ಸಾಕ್ಷಿ ನಿಪಿ.56 ಕಾಲಕ್ಕೆ ತೆಗೆದ ನಿಪಿ 57 ಮತ್ತು 58 ಪೋಟೋಗಳನ್ನು ಹಾಗೂ ವಿಡಿಯೋ ಚಿತ್ರೀಕರಿಸಿದ ನಿಪಿ.96 ಸಿಡಿಯನ್ನು ನೋಡಿ ಗುರ್ತಿಸಿರುತ್ತಾರೆ.

ದಿನಾಂಕ:**17-6-2021** ರಂದು ಬಳ್ಳಾರಿ ಮಹಿಳಾ ಪೊಲೀಸ್ ಠಾಣೆಯ ಅವರಣದಲ್ಲಿ ಸಾಕ್ಷಿದಾರರಾದ ಚಾಸಾ.29 ಸಾಗರ ತಂದೆ ಗೋವಿಂದರಾಜು ರವರು ಕಾರ್ ನಂ:ಕೆ:ಎ:18-ಪಿ-1523 ನೇದ್ದನ್ನು ಹಾಜರು ಪಡಿಸಿದ್ದನ್ನು ಪಿ.ಐ.ರವರು

ಮೇಲ್ಕಂಡ ಪಂಚರ ಸಮಕ್ಷಮ ಮದ್ಯಾಹ್ನ 1-15 ಗಂಟೆಯಿಂದ ಮದ್ಯಾಹ್ನ 02 ಗಂಟೆಯವರೆಗೆ ಕಾರ್ ಜಪ್ತು ಪಂಚನಾಮೆ ನಿಪಿ.61 ರಂತೆ ಮಾಡಿದ್ದು, ನಾನು ಪಂಚನಾಮೆಯನ್ನು ಟೈಪ್ ಮಾಡಿದ್ದು, ಇದಕ್ಕೆ ದಸ್ತೂರ ಸಹಿ ಮಾಡಿರುತ್ತೇನೆ. ಸಾಕ್ಷಿ ಸಹಿಯನ್ನು ನಿಪಿ.61(ಇ) ಎಂದು ಗುರ್ತಿಸಲಾಯಿತು.

ದಿನಾಂಕ:**01-7-2021** ರಂದು ಶ್ರೀಮತಿ ಶಾರದ ಮ.ಪಿ.ಎಸ್.ಐ.ರವರು ಮೃತ ಜಯಮ್ಮರವರ ಮನೆ ಶೋಧನಾ ಪಂಚನಾಮೆ ಪಂಚರಾದ 1) ಜಗದೀಶ ಎಂ.ಎನ್. ತಂದೆ ಲೇಟ್ ನಾಗಪ್ಪ, 2) ಕೆ.ಎಂ.ಬಸವರಾಜ್ ತಂದೆ ಲೇಟ್ ಕೆ.ಎಂ. ದೊಡ್ಡಯ್ಯ ರವರ ಸಮಕ್ಷಮ ಪಿರ್ಯಾದಿದಾರರಾದ ಶ್ರೀಮತಿ ಶ್ರಾವಣಿರವರ ತೋರಿಸಿದ ಮನೆಯಲ್ಲಿ ಫ್ಯಾಷನ್ ಪ್ರೋ ಮೋಟಾರ್ ಸೈಕಲ್ ನಂ:ಕೆ:ಎ:34:ಎ:2957 ನೇದ್ದ ಆರ್. ಸಿ. ಪುಸ್ತಕ ಮತ್ತು ಒಂದು ಪ್ರಾಮಿಸರಿ ನೋಟನ್ನು ಬೆಳಿಗ್ಗೆ10-45 ಗಂಟೆಯಿಂದ ಬೆಳಿಗ್ಗೆ 12-00 ಗಂಟೆಯವರೆಗೆ ಪಂಚನಾಮೆ ಮಾಡಿ ಜಪ್ತು ಮಾಡಿಕೊಳ್ಳಲಾಗಿತ್ತು. ಸದರಿ ಪಂಚನಾೆಮಯನ್ನು ಬರೆದು ದಸ್ತೂರ ಸಹಿ ಮಾಡಿರುತ್ತೇನೆ. ನಿಪಿ.10 ರಲ್ಲಿ ಸಾಕ್ಷಿ ಸಹಿಯನ್ನು ನಿಪಿ.10(ಸಿ) ಎಂದು ಗುರ್ತಿಸಲಾಯಿತು. ನಿಪಿ.10 ರ ಸಮಯದಲ್ಲಿ ನಿಪಿ11 ರಂತೆ ಪೋಟೋ ತೆಗೆಸಲಾಗಿತ್ತು. ಪ್ರಾಮಿಸರಿ ನೋಟ್ & ಸಂಬಂದಿಸಿದ ದಾಖಲೆಗಳು ಜೆರಾಕ್ಸ್ ಗಳ ಪ್ರತಿ ಇದ್ದು, ಅವುಗಳನ್ನು ನಿಶಾನೆಯಾಗಿ ಗುರ್ತಿಸಿಲ್ಲ.

ದಿನಾಂಕ:**01-7-2021** ರಂದು ಫೆಡ್ ಬ್ಯಾಂಕನಲ್ಲಿ 01 ಆರೋಪಿ ಕೊಟ್ಟ ಚಾಸಾ.24 ರವರು ಅಡುವಿಟ್ಟ ಬಂಗಾರದ ಆಭರಣಗಳನ್ನು ಶ್ರೀಮತಿ ಶಾರದ ಪಿ.ಎಸ್.ಐ.ರವರು ಮೇಲ್ಕಂಡ ಪಂಚರ ಸಮಕ್ಷಮ ಬ್ಯಾಂಕ್ ಮ್ಯಾನೇಜರ್ ಹಾಜರುಪಡಿಸಿದ 1) 44 ಗ್ರಾಂವುಳ್ಳ ಒಂದು ಬಂಗಾರದ ಚೈನ್, 2) ಒಂದು ಬಂಗಾರದ ಚೈನ್ ಗಳನ್ನು , ಮದ್ಯಾಹ್ನ 1-40 ಗಂಟೆಯಿಂದ ಮದ್ಯಾಹ್ನ 2-40 ಗಂಟೆಯವರೆಗೆ ಜಪ್ತು ಪಂಚನಾಮೆಯನ್ನು ನಿಪಿ.43 ರಂತೆ ಮಾಡಿ ಜಪ್ತು ಮಾಡಿಕೊಂಡಿದ್ದರು. ಸದರಿ ಪಂಚನಾಮೆಯನ್ನು ಬರೆದು ಅದಕ್ಕೆ ನಾನು ದಸ್ತೂರಿ ಸಹಿ ಮಾಡಿರುತ್ತೇನೆ. ಸದರಿ ಪಂಚನಾೆಮಯಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.43(ಇ) ಎಂದು ಗುರುತಿಸಿಸಲಾಯಿತು. ಸಾಕ್ಷಿಯು ಮು.ಮಾ. 4& 5 ಹಾಗೂ ನಿ.ಪಿ.45,46,47, ರಶೀದಿಗಳನ್ನು ಹಾಗೂ ನಿಪಿ.44 ರಂತೆ 6 ಪೋಟುಗಳನ್ನು ನೋಡಿ ಗುರ್ತಿಸಿರುತ್ತಾರೆ.

ದಿನಾಂಕ:**02-7-2021** ರಂದು ನಿಪಿ**-12** ಪಂಚನಾಮೆ ಸಮಯದಲ್ಲಿ ಹಾಜರಿದ್ದು ನಿಪಿ**-12** ಪಂಚನಾಮೆಯನ್ನು ಬರೆದು ಸಹಿ ಮಾಡಿದ್ದೆ. ನಿಪಿ**-12** ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ**-12(ಎಫ್)** ಎಂದು ಗುರುತಿಸಲಾಯಿತು**.** ಪಂಚನಾಮೆಯ ಸಮಯದಲ್ಲಿ ತೆಗೆದ ಪೋಟೋಗಳ ಡಿವಿಡಿ ನಿಪಿ**-13** ನ್ನು ಹಾಗೂ ಪಂಚನಾಮೆಗಳ ಸಮಯದಲ್ಲಿ ತೆಗೆದ ಪೋಟೋ ನಿಪಿ**-50** ನ್ನು ಸಾಕ್ಷಿ ನೋಡಿ ಗುುತಿಸಿರುತ್ತಾರೆ**.**

ದಿನಾಂಕ:**12-7-2021** ರಂದು ಗುನ್ನೆ ನಂ 52-2021 ರಲ್ಲಿ ಮಹಿಳೆಯರು ಕಾಣೆಯಾದ ಪ್ರಕರಣದಲ್ಲಿ ನಾನು ಅಂತಿಮ ವರದಿಯನ್ನು ನೀಡಿದ್ದೆ. ಸದರಿ ಅಂತಿಮ ವರದಿಯ ಟ್ರೂ ಕಾಪಿಯನ್ನು ನಿಪಿ-180 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ</u>**

ಇಬ್ಬರು ಮಹಿಳೆಯರು ಕಾಣೆಯಾದ ಬಗ್ಗೆ ದೂರು ನೀಡಲು 3 ತಿಂಗಳು ತಡವಾಗಿರುತ್ತದೆ. ಈ ಬಗ್ಗೆ ಯಾವುದೇ ಕಾರಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ತೆಗೆದಿದ್ದೆ ಎಂದು ಹೇಳಿದಂತಹ ಫೋಟೋಗಳ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ಅಡಿಯಲ್ಲಿ ಯಾವುದೇ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ. ಫೋಟೋಗಳ ಮೇಲೆ ಸಮಯ ಮತ್ತು ದಿನಾಂಕ ನಮೂದು ಇಲ್ಲ ಎಂದರೆ ಸರಿ. ಪಂಚರಿಗೆ ಲಿಖಿತವಾಗಿ ನೋಟೀಸ್ ನ್ನು ನೀಡಲಾಗಿತ್ತು. ಅದರ ಪ್ರತಿಯನು ಹಾಜರು ಪಡಿಸಲಾಗಿದೆ. ದೂರನ್ನು ಕಂಪ್ಯೂಟರ್ ನಿಂದ ಟೈಪ್ ಮಾಡಿಸಿ ಕೊಡಲಾಗಿದೆ. ಸದರಿ ದೂರನ್ನು ನಾನು ಸುಳ್ಳು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಗಳಿಗೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಸ್ಥಳಗಳಲ್ಲಿ ನಾನು ಹೇಳಿದಂತೆ ಯಾವುದೇ ಪಂಚನಾಮೆಗಳನ್ನು ನಾನು ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಎಲ್ಲಾ ಪಂಚನಾಮೆಗಳನ್ನು ಠಾಣೆಯಲ್ಲಿಯೇ ಕೇಸಿಗೆ ಅನುಕುಲಾವಾಗುವಂತೆ ತಯಾರಿಸಿ ನನ್ನ ಸಹಿಯನ್ನು ಠಾಣೆಯಲ್ಲಿಯೇ ಮಾಡಿದ್ದೇನೆ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಅಂಶಗಳಿಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಎಫ್ ಐ ಆರ್ ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**